# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ದೂರವಾಣಿ ಸಂಖ್ಯೆ : 080-22212343

ಅಂತರ್ಜಾಲ : https://kptcl.karnataka.gov.in

ಇ-ಮೇಲ್ ವಿಳಾಸ : director.ahr.kptcl@gmail.com


**ವಿಷಯ:** ಚಿಕ್ಕನಾಯಕನಹಳ್ಳಿಯಲ್ಲಿರುವ 110/11ಕೆ.ವಿ ಉಪಕೇಂದ್ರದ ಆವರಣದಲ್ಲಿ ಬೆ.ವಿ.ಕಂ ವತಿಯಿಂದ ನೂತನ ಉಪವಿಭಾಗ ಕಚೇರಿ ಕಟ್ಟಡ ನಿರ್ಮಿಸಲು ನಿಗಮದ ಜಾಗವನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ.

**ಉಲ್ಲೇಖ:**

1. ಕವಿಪ್ರನಿನಿ/ಬಿ9/4948/04-05 ದಿನಾಂಕ 29/04/2005.
2. ಕವಿಪ್ರನಿನಿ/ಬಿ9/4948/04-05 ದಿನಾಂಕ 26/10/2006.
3. ಅಧೀಕ್ಷಕ ಇಂಜಿನಿಯರ್ (ವಿ), ವಾ,ಕಾ ಮತ್ತು ಪಾ ವೃತ್ತ, ಬೆ.ವಿ.ಕಂ ತುಮಕೂರು ರವರ ಪತ್ರ ಸಂಖ್ಯೆ 1663-65 ದಿನಾಂಕ 16/09/2022.
4. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ತುಮಕೂರು ರವರ ಪತ್ರ ಸಂಖ್ಯೆ 4919-23 ದಿನಾಂಕ 05/08/2022.
5. ದಿನಾಂಕ 27/12/2022 ರಂದು ನಡೆದ 137 ನೇ ಕವಿಪ್ರನಿನಿ ಮಂಡಳಿ ನಿರ್ಣಯಗಳ "Certified True Copy" ಯ ಸಂಖ್ಯೆ KPTCL/CS/B37/4437/2001-02/1084 ದಿನಾಂಕ 20/02/2023.

ಪೀಠಿಕೆ:

1. ಚಿಕ್ಕನಾಯಕನಹಳ್ಳಿ 110/11ಕೆ.ವಿ ಉಪಕೇಂದ್ರದ ಆವರಣದಲ್ಲಿ ಸುಮಾರು 5 ಎಕರೆ ಜಾಗ ಕವಿಪ್ರನಿನಿ ಸ್ವಾಮ್ಯದಲ್ಲಿರುತ್ತದೆ. ಸದರಿ ಆವರಣದಲ್ಲಿ 110ಕೆ.ವಿ. ಉಪಕೇಂದ್ರ, ವಸತಿಗೃಹಗಳು ಹಾಗೂ ಕಚೇರಿ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಬೆ.ವಿ.ಕಂ ನ ಉಪವಿಭಾಗ/ಶಾಖಾ ಕಚೇರಿಗಳು ಕವಿಪ್ರನಿನಿ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದೆ.

2. ಸದರಿ ಉಪವಿಭಾಗ ಕಚೇರಿ ಕಟ್ಟಡವನ್ನು 1960 ರಲ್ಲಿ ರೂ.90,000/- ಗಳ ಮೂಲಬೆಲೆಯಲ್ಲಿ ನಿರ್ಮಿಸಿದ್ದು, ಪ್ರಸ್ತುತ ಸದರಿ ಕಟ್ಟಡವು ಶಿಥಿಲಾವಸ್ಥೆಯಲ್ಲಿರುತ್ತದೆ. ಶಿಥಿಲಗೊಂಡಿರುವ ಉಪವಿಭಾಗ ಕಚೇರಿ ಕಟ್ಟಡವನ್ನು ನೆಲಸಮಗೊಳಿಸಿ, ನೂತನ ಉಪವಿಭಾಗ ಕಟ್ಟಡ ನಿರ್ಮಿಸಲು,45 ಮೀ. X 25 ಮೀ. ಜಾಗವನ್ನು ಲೀಸ್ ಆಧಾರದ ಮೇಲೆ ನೀಡಲು ಅಧೀಕ್ಷಕ ಇಂಜಿನಿಯರ್ (ವಿ), ವಾ, ಕಾ ಮತ್ತು ನಿ ವೃತ್ತ, ಬೆವಿಕಂ ತುಮಕೂರು ರವರು ಕೋರಿರುತ್ತಾರೆ.

3. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ತುಮಕೂರು ರವರು ಚಿಕ್ಕನಾಯಕನಹಳ್ಳಿಯಲ್ಲಿನ 110/11ಕೆ.ವಿ. ಆವರಣದಲ್ಲಿ 45 ಮೀ. X 25 ಮೀ. ಅಳತೆಯ ಜಾಗವನ್ನು ಹಾಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡವನ್ನು ತೆರವುಗೊಳಿಸಿ ಬೆ.ವಿ.ಕಂ ಗೆ ಉಪವಿಭಾಗ ಕಚೇರಿ ಕಟ್ಟಡ ನಿರ್ಮಿಸಲು 30 ವರ್ಷಗಳ ಲೀಸ್

ಆಧಾರದ ಮೇಲೆ ನೀಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಜಾಗವನ್ನು ನೀಡುವುದರಿಂದ ಕವಿಪ್ರನಿನಿಯ ಅಭಿವೃದ್ಧಿ ಕಾರ್ಯಗಳಿಗೆ ಅಡಚಣೆಯಾಗುವುದಿಲ್ಲವೆಂದು ತಿಳಿಸಿರುತ್ತಾರೆ.

4. ಕವಿಪ್ರನಿನಿ ಯ ಒಡೆತನದಲ್ಲಿದ್ದ ಒಟ್ಟಾರೆ ಆಸ್ತಿಯನ್ನು ಪ್ರಸರಣ ಆಸ್ತಿ ಹಾಗೂ ವಿತರಣಾ ಆಸ್ತಿಗಳೆಂದು ವರ್ಗೀಕರಿಸಿದ ನಂತರ, ಎಸ್ಕಾಂ ಗಳಿಗೆ ಅವಶ್ಯವಿರುವ ಕವಿಪ್ರನಿನಿ ಜಾಗವನ್ನು ಹಾಗೂ ಕವಿಪ್ರನಿನಿ ಗೆ ಅವಶ್ಯವಿರುವ ಎಸ್ಕಾಂ ಗಳ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ, ದಿನಾಂಕ 29/04/2005 ರ ಆದೇಶದಲ್ಲಿ Arms-length arrangement ನ್ನು ಅನುಮೋದಿಸಲಾಗಿದೆ. ಸದರಿ ಆದೇಶದನ್ವಯ, ಕವಿಪ್ರನಿನಿ ಯಿಂದ ಎಸ್ಕಾಂಗಳಿಗೆ ಲೀಸ್ ಆಧಾರದ ಮೇಲೆ ನೀಡುವ ಜಾಗಗಳ ವಾರ್ಷಿಕ ಲೀಸ್ ಮೊತ್ತವನ್ನು ಸಾಂಕೇತಿಕವಾಗಿ ಪ್ರಚಲಿತ ಮಾರ್ಗಸೂಚಿ ಬೆಲೆಯ 0.1 ರಂತೆ ನಿಗದಿಪಡಿಸಬಹುದಾಗಿದ್ದು, ಸದರಿ ಲೀಸ್ ಮೊತ್ತವನ್ನು ಪ್ರತಿ 5 ವರ್ಷಗಳಿಗೊಮ್ಮೆ ಅಂದಿನ ಮಾರ್ಗಸೂಚಿ ಬೆಲೆಯನ್ವಯ ಪರಿಷ್ಕರಿಸಬಹುದಾಗಿರುತ್ತದೆ.

5. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿನ 110/11ಕೆ.ವಿ. ಉಪಕೇಂದ್ರದ ಆವರಣದಲ್ಲಿ ಬೆ.ವಿ.ಕಂ ನ ಉಪವಿಭಾಗ ಕಚೇರಿ ಕಟ್ಟಡವನ್ನು ನಿರ್ಮಿಸಲು ಹಾಲಿ ಶಿಥಿಲಾವಸ್ಥೆಯಲ್ಲಿರುವ ಕಚೇರಿ ಕಟ್ಟಡವನ್ನು ಬೆ.ವಿ.ಕಂ ನ ವತಿಯಿಂದಲೇ ತೆರವುಗೊಳಿಸಿ 45 ಮೀ. X 25 ಮೀಟರ್ ಅಳತೆಯ ಜಾಗವನ್ನು ಕವಿಪ್ರನಿನಿ ಮತ್ತು ಎಸ್ಕಾಂ ಗಳ ನಡುವೆ ಚಾಲ್ತಿಯಲ್ಲಿರುವ Arms-length arrangement ರನ್ವಯ, ಬೆ.ವಿ.ಕಂ ಗೆ 30 ವರ್ಷಗಳ ಲೀಸ್ ಆಧಾರದ ಮೇಲೆ ನೀಡುವ ಪ್ರಸ್ತಾವನೆಯನ್ನು, ದಿನಾಂಕ 27/12/2022 ರಂದು ನಡೆದ 137 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರ ಸಭೆಯಲ್ಲಿ ಮಂಡಿಸಲಾಗಿದ್ದು, ಸದರಿ ಸಭೆಯ ನಡವಳಿಯನ್ವಯ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ: ಕವಿಪ್ರನಿನಿ/ಬಿ9/85296/18-19/ಬೆಂಗಳೂರು** **ದಿನಾಂಕ 20/02/2023**

ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ 110/11ಕೆ.ವಿ. ಉಪಕೇಂದ್ರದ ಆವರಣದಲ್ಲಿನ ಹಾಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಶಿಥಿಲಾವಸ್ಥೆಯಲ್ಲಿರುವ ಉಪವಿಭಾಗ ಕಚೇರಿ ಕಟ್ಟಡವನ್ನು ಬೆ.ವಿ.ಕಂ ನ ವತಿಯಿಂದಲೇ ತೆರವುಗೊಳಿಸಿ ಬೆ.ವಿ.ಕಂ ನ ನೂತನ ಉಪವಿಭಾಗ ಕಚೇರಿ ಕಟ್ಟಡವನ್ನು ನಿರ್ಮಿಸಲು ಸದರಿ ಕಟ್ಟಡವನ್ನೊಳಗೊಂಡಂತೆ 45 ಮೀ. X 25 ಮೀಟರ್ ಅಳತೆಯ ನಿಗಮದ ಜಾಗವನ್ನು ಲೀಸ್ ಆಧಾರದ ಮೇಲೆ ನೀಡಲು ಆದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಸದರಿ ಜಾಗವನ್ನು ಬೆ.ವಿ.ಕಂ ಗೆ ಈ ಕೆಳಕಂಡ ಷರತ್ತುಗಳನ್ವಯ ಲೀಸ್ ಆಧಾರದ ಮೇಲೆ ನೀಡಲು ಕೂಡಲೆ ಅಗತ್ಯ ಕ್ರಮಕೈಗೊಳ್ಳುವಂತೆ ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ತುಮಕೂರು ರವರಿಗೆ ನಿರ್ದೇಶನ ನೀಡಲಾಗಿದೆ.

1. ಬೆ.ವಿ.ಕಂ ಕೋರಿಕೆಯನ್ವಯ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿನ 110/11ಕೆ.ವಿ ಉಪಕೇಂದ್ರದ ಆವರಣದಲ್ಲಿ ಬೆ.ವಿ.ಕಂ ನ ಉಪವಿಭಾಗ ಕಚೇರಿ ಕಟ್ಟಡವನ್ನು ನಿರ್ಮಿಸಲು ಸದರಿ ಕಟ್ಟಡವನ್ನೊಳಗೊಂಡಂತೆ 45 ಮೀ. X 25 ಮೀಟರ್ ಅಳತೆಯ ನಿಗಮದ ಜಾಗವನ್ನು 30 ವರ್ಷಗಳ ಲೀಸ್ ಆಧಾರದ ಮೇಲೆ ಹಂಚಿಕೆ ಮಾಡುವುದು.

2. ಸದರಿ ಜಾಗದಲ್ಲಿ ಹಾಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡವನ್ನು ಬೆ.ವಿ.ಕಂ ನ ವತಿಯಿಂದಲೇ 'as is where is basis' ನಂತೆ ತೆರವುಗೊಳಿಸಲು ಹಾಗೂ ಸದರಿ ಕಟ್ಟಡವನ್ನು ತೆರವುಗೊಳಿಸುವ ಟೆಂಡರ್ ಪ್ರಕ್ರಿಯೆಯಲ್ಲಿ ಗುತ್ತಿಗೆದಾರರು ಬೆ.ವಿ.ಕಂ ಗೆ ಪಾವತಿಸುವಂತಹ ಮೊತ್ತ ಇದ್ದಲ್ಲಿ, ಸದರಿ ಮೊತ್ತವನ್ನು ಕವಿಪ್ರನಿನಿ ಲೆಕ್ಕಕ್ಕೆ ಜಮಾ ಮಾಡುವಂತೆ ಬೆ.ವಿ.ಕಂ ಗೆ ತಿಳಿಸುವುದು.

3. ಬೆವಿ.ಕಂ ನಿಂದ ತುಮಕೂರು ಪ್ರಸರಣ ವಲಯ ವ್ಯಾಪ್ತಿಯಲ್ಲಿ ಕವಿಪ್ರನಿನಿ ಕಟ್ಟಡಗಳ ಬಾಡಿಗೆ, ನಿರ್ವಹಣೆ ವೆಚ್ಚ, ನೀರು ಸರಬರಾಜು ವೆಚ್ಚ ಹಾಗೂ ಲೀಸ್ ಮೊತ್ತಗಳ ಬಾಕಿ ಮೊತ್ತಗಳನ್ನು ದಿನಾಂಕ 31/03/2022 ರವರೆಗೆ ಪಾವತಿಸಿಕೊಳ್ಳಲು ಕ್ರಮಕೈಗೊಳ್ಳುವುದು.

4. ಸದರಿ ಜಾಗವನ್ನು ಬೆ.ವಿ.ಕಂ ಗೆ ನೀಡುವ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿಎಲ್ ಮತ್ತು ಎಸ್ಎಸ್ ವಿಭಾಗ, ತುಮಕೂರು ರವರು ಬೆ.ವಿ.ಕಂ ನೊಂದಿಗೆ ಲೀಸ್ ಒಪ್ಪಂದ ಮಾಡಿಕೊಳ್ಳುವುದು.

5. ಸದರಿ ಜಾಗದ ಹಾಲಿ ಮಾರ್ಗಸೂಚಿ ಬೆಲೆಯನ್ವಯ ಹಾಗೂ ಕವಿಪ್ರನಿನಿ ಮತ್ತು ಎಸ್ಕಾಂ ಗಳ ನಡುವೆ ಹಾಲಿ ಇರುವ Arms-length arrangement ನ ನಿಯಮಗಳಂತೆ, ವಾರ್ಷಿಕ ಲೀಸ್ ಮೊತ್ತವನ್ನು ಲೆಕ್ಕಾಚಾರ ಮಾಡಿ ಪಾವತಿಸುವಂತೆ, ಬೆ.ವಿ.ಕಂ ಗೆ ಸೂಚಿಸುವುದು.

6. ಸದರಿ ಲೀಸ್ ಮೊತ್ತವನ್ನು ಪ್ರತಿ 5 ವರ್ಷಗಳಿಗೊಮ್ಮೆ, ಅಂದಿನ ಮಾರ್ಗಸೂಚಿ ಬೆಲೆಯನ್ವಯ ಹಾಗೂ Arms-length arrangement ನ ನಿಯಮಗಳನ್ವಯ, ಪರಿಷ್ಕರಿಸುವುದು. ಹಾಗೂ ವಾರ್ಷಿಕ ಲೀಸ್ ಮೊತ್ತವನ್ನು, ಪ್ರತಿ ವರ್ಷ ಏಪ್ರಿಲ್ ಮಾಹೆಯ ಮೊದಲ ವಾರದಲ್ಲಿ, ಮುಂಗಡವಾಗಿ ತುಮಕೂರು, ಟಿಎಲ್ ಮತ್ತು ಎಸ್ಎಸ್ ವಿಭಾಗಕ್ಕೆ, ಪಾವತಿಸುವಂತೆ ಬೆ.ವಿ.ಕಂ ಗೆ ಸೂಚಿಸುವುದು.

7. ಬೆ.ವಿ.ಕಂ ಗೆ ನೀಡಲು ಅನುಮೋದಿಸಿರುವ ಜಾಗವನ್ನು, ಉದ್ದೇಶಿತ ಕಟ್ಟಡದ ನಿರ್ಮಾಣಕ್ಕೆ ಮಾತ್ರ ಉಪಯೋಗಿಸುವಂತೆ ಹಾಗೂ ಬೇರೆ ಯಾವುದೆ ಉದ್ದೇಶಕ್ಕೆ ಬಳಸಬಾರದೆಂಬ, ಷರತ್ತನ್ನು ವಿಧಿಸುವುದು.

8. ಬೆ.ವಿ.ಕಂ ಗೆ ನೀಡಲು ಅನುಮೋದಿಸಿರುವ ಜಾಗದ ಕರಾರು ಒಪ್ಪಂದ ಮಾಡಿಕೊಂಡ ದಿನದಿಂದ, ಒಂದು ವರ್ಷದ ಅವಧಿಯೊಳಗೆ, ಉದ್ದೇಶಿತ ಕಟ್ಟಡದ ನಿರ್ಮಾಣಕ್ಕೆ ಕ್ರಮಕೈಗೊಳ್ಳುವಂತೆ ತಿಳಿಸುವುದು, ಇಲ್ಲವಾದ್ದಲ್ಲಿ, ಒಪ್ಪಂದದ ಕರಾರು ರದ್ದಾಗುವುದೆಂಬ ಷರತ್ತನ್ನು ವಿಧಿಸುವುದು.

9. ನಿಗಮ ಲೀಸ್ ನೀಡಲು ಅನುಮೋದಿಸಿರುವ ಜಾಗವನ್ನು ಒತ್ತುವರಿಯಾಗದಂತೆ ಸಂರಕ್ಷಿಸಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳಲು ಬೆ.ವಿ.ಕಂ ಗೆ ಸೂಚಿಸುವುದು ಹಾಗೂ ಲೀಸ್ ಆಧಾರದ ಮೇಲೆ ಬೆ.ವಿ.ಕಂ ಗೆ ನೀಡಲು ಅನುಮೋದಿಸಿರುವ ಜಾಗದ ಬಗ್ಗೆ, ಟಿಎಲ್ ಮತ್ತು ಎಸ್‌ಎಸ್ ವಿಭಾಗದ ಆಸ್ತಿ ಪುಸ್ತಕದಲ್ಲಿ, ಅಗತ್ಯ ದಾಖಲಾತಿಗಳನ್ನು ಮಾಡುವುದು.

10. ಬೆ.ವಿ.ಕಂ ಗೆ ನೀಡಲು ಅನುಮೋದಿಸಿರುವ ಜಾಗದ ಬಗ್ಗೆ ನಿಗಮದ ದಿನಾಂಕ 24/04/2005 ರ ಆದೇಶ ಹಾಗೂ 26/10/2006 ಸುತ್ತೋಲೆಯಲ್ಲಿ ತಿಳಿಸಿರುವ Arms-length arrangement ನ ನಿಯಮಗಳನ್ವಯ ಮುಂದಿನ ಅಗತ್ಯ ಕ್ರಮಕೈಗೊಳ್ಳುವುದು.

ಆದೇಶದ ಮೇರೆಗೆ

ನಿರ್ದೇಶಕರು (ಆ ಮತ್ತು ಮಾ.ಸಂ)
ಕವಿಪ್ರನಿನಿ, ಬೆಂಗಳೂರು.

ಪ್ರತಿಗಳು:-

1. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಕೆ.ಆರ್. ವೃತ್ತ, ಬೆಂಗಳೂರು.
2. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ತುಮಕೂರು.
3. ಮುಖ್ಯ ಇಂಜಿನಿಯರ್ (ವಿ), (ಕಾ ಮತ್ತು ಪಾ) ವಲಯ, ಬೆಸ್ಕಾಂ ಚಿತ್ರದುರ್ಗ.
4. ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ) /(ಆಂತರಿಕ ಪರಿಶೋಧನೆ), ಕವಿಪ್ರನಿನಿ, ಬೆಂಗಳೂರು.
5. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
6. ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ, ತುಮಕೂರು.
7. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
8. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ) – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
9. ಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ ವಲಯ, ಕವಿಪ್ರನಿನಿ, ತುಮಕೂರು.
10. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿಎಲ್ ಮತ್ತು ಎಸ್‌ಎಸ್ ವಿಭಾಗ, ಕವಿಪ್ರನಿನಿ, ತುಮಕೂರು.
11. ಕಾರ್ಯನಿರ್ವಾಹಕ ಇಂಜಿನಿಯರ್ (ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ, ತುಮಕೂರು.
12. ಉಪಲೆಕ್ಕ ನಿಯಂತ್ರಣಾಧಿಕಾರಿ (ಆಂತರಿಕ ಪರಿಶೋಧನೆ), ಪ್ರಸರಣ ವಲಯ, ಕವಿಪ್ರನಿನಿ, ತುಮಕೂರು.
13. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
14. ಲೆಕ್ಕಾಧಿಕಾರಿ (ಕೋಡಿಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.